# ಬೇಬಿ ಬಾಸ್

## ವೈಭವೋಪೇತ ಮುನ್ನುಡಿ




ಐಪಿಎಲ್‌ನಲ್ಲಿ 'ಗುಜರಾತ್ ಟೈಟಾನ್ಸ್' ತಂಡದ ಎದುರು 38 ಎಸೆತಗಳಲ್ಲಿ ಶತಕ ಗಳಿಸಿ, ಎರಡನೇ ವೇಗದ ಶತಕ ದಾಖಲಿಸಿದ ಚಿಣ್ಣ ವೈಭವ್ ಸೂರ್ಯವಂಶಿ ಈಗ ಎಲ್ಲರ ಪಾಲಿಗೆ ಕಣ್ಮಣಿ. ಬೆಳೆಯುವ ಈ ಪೈರು ಮೊಳಕೆಯಲ್ಲಿ ಕಂಡಿರುವ ರೀತಿ ಅನೇಕರು ಬೆರಗುಗಣ್ಣಾಗಲು ಕಾರಣವಾಗಿದೆ. 11 ಸಿಕ್ಸರ್, 7 ಬೌಂಡರಿಯ ಆ ಇನಿಂಗ್ಸ್, ಕ್ರಿಕೆಟ್‌ಪ್ರಿಯರ ನೆನಪುಗಳ ಆಲ್ಬಂಗೆ ಸೇರ್ಪಡೆಯಾಗಿದೆ.

■ ವಿಶಾಖ ಎನ್.

ರಾಹುಲ್ ದ್ರಾವಿಡ್ ಗಾಲಿಕುರ್ಚಿಯಿಂದ ಆ ಕ್ಷಣ ಥಟ್ಟನೆ ಮೇಲೆದ್ದರು. ಅವರ ಕಾಲುನೋವಿಗೆ ವೈಭವ್ ಸೂರ್ಯವಂಶಿ ಎಂಬ ಹುಡುಗ ಶತಕದ ಮುಲಾಮು ಹಚ್ಚಿದ್ದ. ಪಾಠ ಕೇಳಿದ ಶಿಷ್ಯೋತ್ತಮನೊಬ್ಬ ದೊಡ್ಡದೇನನ್ನೋ ಕಟೆದಿಟ್ಟಾಗ ಈ ರೀತಿಯ ಹರ್ಷಾಭಿವ್ಯಕ್ತಿ, ಭಾವೋದ್ವೇಗ ಹೊಮ್ಮುವುದು ಸಹಜವೇ.

ಬಿಹಾರದ ಹದಿನಾಲ್ಕರ ಹುಡುಗ ವೈಭವ್ ಸೂರ್ಯವಂಶಿ. ಕಳೆದ ವರ್ಷದ ಕೊನೆಯಲ್ಲಿ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಹರಾಜಿನಲ್ಲಿ ಒಂದು ಕೋಟಿ ಹನ್ನೊಂದು ಲಕ್ಷ ಚಿಲ್ಲರೆ ರೂಪಾಯಿಗೆ ಈ ಹುಡುಗನನ್ನು 'ರಾಜಸ್ಥಾನ ರಾಯಲ್ಸ್' (ಆರ್‌ಆರ್) ತಂಡವು ಆರಿಸಿಕೊಂಡಾಗ, ಯಾರಿಗೂ ಇಷ್ಟು ಸ್ಫೋಟಕ ಆಟಗಾರ ಎನ್ನುವ ಅರಿವು ಇರಲಿಲ್ಲ. ಯಾಕೆಂದರೆ, ಆಗಿನ್ನೂ ಅವನಿಗೆ ಹದಿಮೂರು ವರ್ಷವಾಗಿತ್ತು.

ಈ ಐಪಿಎಲ್ ಋತುವಿನಲ್ಲಿ ತಾನು ಎದುರಿಸಿದ ಮೊದಲ ಎಸೆತವನ್ನೇ ವೈಭವ್ ಸಿಕ್ಸರ್‌ಗೆ ಅಟ್ಟಿದ್ದ, ಅದೂ ಲಖನೌ ಸೂಪರ್‌ಜೈಂಟ್ಸ್ (ಎಲ್‌ಎಸ್‌ಜಿ) ತಂಡದ ಅನುಭವಿ ಬೌಲರ್ ಶಾರ್ದೂಲ್ ಠಾಕೂರ್ ಹಾಕಿದ ಚೆಂಡನ್ನು. 20 ಎಸೆತಗಳಲ್ಲಿ 34 ರನ್ ಚಚ್ಚಿ ಚೊಚ್ಚಿಲ ಇನಿಂಗ್ಸ್‌ನಲ್ಲಿಯೇ ತನ್ನ ಆಕ್ರಮಣಕಾರಿ ಆಟದ ಝಲಕ್ ನೀಡಿದ್ದ.